


## ಎಲ್ಲರಿಗೂ ಎಚ್ಚರಿಕೆಯ ಗಂಟೆ

‘ಕ್ಲೈಮೇಟ್ ಬಾಯ್ಲಿಂಗ್’ – ಜೀವಸಂಕುಲಕ್ಕೇ ಪ್ರಮುಖ ವಿದ್ಯಮಾನ. ಇದೇ ಜುಲೈ ಹಾಗೂ ಆಗಸ್ಟ್ ತಿಂಗಳು, ವಿಶ್ವ ಹಾಗೂ ರಾಜ್ಯದಲ್ಲಿ 122 ವರ್ಷದಲ್ಲೇ ಅತಿ ಹೆಚ್ಚು ಬಿಸಿ–ಶಾಖಕ್ಕೆ ಸಾಕ್ಷಿಯಾಯಿತು. ಎಂದೂ ಕಂಡರಿಯದ ಅತಿಯಾದ ಶಾಖದಿಂದ ಎಷ್ಟೋ ಸಸ್ಯ ಹಾಗೂ ಪ್ರಾಣಿಸಂಕುಲ ಸಂಕಟ ಅನುಭವಿಸಿದವು. ಕ್ಲೈಮೇಟ್ ಚೇಂಜಿಂಗ್‌ನಿಂದ ಕ್ಲೈಮೇಟ್ ಬಾಯ್ಲಿಂಗ್‌ನ ಅಪಾಯಕಾರಿ ಹಂತಕ್ಕೆ ತಲುಪುತ್ತಿದ್ದೇವೆ ಎಂದು ಇದರರ್ಥ. ಹವಾಮಾನ ವಿಷಯ ನಮ್ಮ ಕೈ ಮೀರಿ ಹೋಗುತ್ತಿದೆ ಎಂಬುದನ್ನು ಅರ್ಥೈಸಿಕೊಳ್ಳುವ ಸಮಯ.

ಇದರೊಂದಿಗೆ ಬರ ಕೂಡ ಚರ್ಚೆಯಲ್ಲಿದೆ. ಬರ ಹಾಗೂ ನೆರೆ ಆವರ್ತಕದಂತಿದ್ದು, ಒಮ್ಮೆ ಎದುರಾಗಿ ಕೆಲ ಕಾಲದ ನಂತರ ಸಹಜ ಸ್ಥಿತಿಗೆ ಬರುವಂತಿತ್ತು. ಆದರೆ ಈಗ ಎದುರಾಗಲಿರುವ ಬರದ ವಿಶೇಷ ಏನೆಂದರೆ, ಇದು ಕೇವಲ ಸ್ಥಳೀಯ ಸಂಗತಿಯಿಂದಲ್ಲದೆ ಜಾಗತಿಕ ಹವಾಮಾನ ವೈಪರೀತ್ಯದಿಂದ ಪ್ರೇರಿತವಾಗಿರುವುದು. ಹೀಗಾಗಿ ಇದು ಎಷ್ಟು ಕಾಲ ಇರುತ್ತದೆ, ಯಾವಾಗ ಕೊನೆಗಾಣುತ್ತದೆ ಎಂಬುದನ್ನು ಊಹಿಸಲು ಸಾಧ್ಯವಿಲ್ಲ.

ಹವಾಮಾನ ವೈಪರೀತ್ಯವನ್ನು ಸರ್ಕಾರ ಈಗ ಗಂಭೀರವಾಗಿ ಪರಿಗಣಿಸುತ್ತಿದೆ ಎಂಬುದು ಸಮಾಧಾನಕರ. ಹವಾಮಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಸರ್ಕಾರದ ಯೋಜನೆಗಳಲ್ಲಿ ಒಂದಾಗಿಸುತ್ತಿರುವುದು, ‘ಕ್ಲೈಮೇಟ್ ಸ್ಮಾರ್ಟ್ ವಿಲೇಜ್’ ಪರಿಕಲ್ಪನೆಯತ್ತ ಯೋಚಿಸುತ್ತಿರುವುದು ಒಳಿತು. ಆದರೆ ಈ ವರ್ಷ ಎಲ್ಲರಿಗೂ ಎಚ್ಚರಿಕೆಯ ಗಂಟೆ.

**–ಡಾ. ಕೇಶವ ಎಚ್. ಕೊರ್ಸೆ**
ಸಂರಕ್ಷಣಾ ಜೀವಶಾಸ್ತ್ರಜ್ಞ, ಶಿರಸಿ

## ಮಣಿಪುರದಲ್ಲಿ ಹಿಂಸೆಯ ತಾಂಡವ

**ಭಾರತದ** ಈಶಾನ್ಯ ರಾಜ್ಯವಾದ ಮಣಿಪುರದಲ್ಲಿ ನಡೆದ ಹಿಂಸಾಚಾರ ಅಂತರರಾಷ್ಟ್ರೀಯ ಗಮನವನ್ನು ಸೆಳೆದ ವಿದ್ಯಮಾನ. ಕುಕಿ ಮತ್ತು ಮೈತೇಯಿ ಸಮುದಾಯಗಳ ನಡುವಣ ನಡೆದ, ಇನ್ನೂ ತಣ್ಣಗಾಗದ ಸಂಘರ್ಷ, ಕಣಿವೆ ರಾಜ್ಯದಲ್ಲಿ ಕ್ಷೋಭೆಯನ್ನುಂಟುಮಾಡಿದೆ. ಎನ್‌. ಬಿರೇನ್ ಸಿಂಗ್ ನೇತೃತ್ವದ ಸರ್ಕಾರವು ಮೈತೇಯಿ ಸಮುದಾಯದ ಜೊತೆಗೆ ಗುರುತಿಸಿಕೊಂಡಿದ್ದು, ಕುಕಿ ಸಮುದಾಯದ ವಿಶ್ವಾಸವನ್ನು ಕಳೆದುಕೊಂಡಿದೆ ಎನ್ನಲಾಗಿದೆ. ತಮಗೆ ಪ್ರತ್ಯೇಕ ಆಡಳಿತಾತ್ಮಕ ವಲಯ ಬೇಕು ಎಂದು ಕುಕಿ ಸಮುದಾಯ ಆಗ್ರಹಿಸುತ್ತಿದೆ. ಮೈತೇಯಿ ಸಮುದಾಯದ ಪರವಾಗಿರುವ ಸರ್ಕಾರ ಕುಕಿ ಸಮುದಾಯದ ಭಾವನೆಗಳು ಹಾಗೂ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ ಎಂದು ಪ್ರತಿಭಟನಾಕಾರರು ಹೇಳುತ್ತಿದ್ದಾರೆ.

ಮೈತೇಯಿ ಸಮುದಾಯಕ್ಕೆ ಪರಿಶಿಷ್ಟ ಪಂಗಡದ ಸ್ಥಾನಮಾನ ನೀಡಬೇಕೆನ್ನುವ ಬೇಡಿಕೆಗೆ ಪೂರಕವಾಗಿ ನಡೆದ ಬೆಳವಣಿಗೆಗಳು ಸಂಘರ್ಷಕ್ಕೆ ಕಾರಣವಾದವು. ಮೇ 3ರಂದು ಇಂಫಾಲ್ ಕಣಿವೆಯಲ್ಲಿ ಮೈತೇಯಿ ಸಮುದಾಯದ ಜನರು ಹಾಗೂ ಕುಕಿ ಗುಡ್ಡಗಾಡು ಜನರ ನಡುವಿನ ಸಂಘರ್ಷದೊಂದಿಗೆ ಹಿಂಸೆ ಸ್ಫೋಟಗೊಂಡಿತು. ರಾಜ್ಯದುದ್ದಕ್ಕೂ ಹಬ್ಬಿದ ಈ ಜನಾಂಗೀಯ ಹಿಂಸಾಚಾರದಲ್ಲಿ, ಆಯಾ ಪ್ರದೇಶಗಳಲ್ಲಿನ ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡು ದಾಳಿಗಳು ನಡೆದಿವೆ. ಹಿಂಸಾಚಾರದಲ್ಲಿ ನೂರಾರು ಜನರ ಸಾವೀಗೀಡಾಗಿದ್ದು, ಸಾವಿರಾರು ಮಂದಿ ಗಾಯಗೊಂಡಿದ್ದಾರೆ. ಮನೆ, ದೇವಾಲಯ, ಚರ್ಚ್‌ಗಳನ್ನು ನಾಶಗೊಳಿಸಲಾಗಿದೆ. ದೊಡ್ಡ ಸಂಖ್ಯೆಯಲ್ಲಿ ಜನ ಸ್ಥಳಾಂತರಗೊಂಡಿದ್ದಾರೆ. ಕುಕಿ ಸಮುದಾಯದ ಇಬ್ಬರು ಮಹಿಳೆಯರನ್ನು ಬೆತ್ತಲೆ ಮಾಡಿ, ಸಾಮೂಹಿಕ ಅತ್ಯಾಚಾರವೆಸಗಿದ ಬರ್ಬರ ಘಟನೆಗೂ ಮಣಿಪುರ ಸಾಕ್ಷಿಯಾಯಿತು. ಸುಪ್ರೀಂ ಕೋರ್ಟ್ ಮಧ್ಯಪ್ರವೇಶದ ನಂತರವೂ ಕಣಿವೆ ರಾಜ್ಯದಲ್ಲಿ ಈವರೆಗೂ ಶಾಂತಿ ಸ್ಥಾಪನೆಯ ಕಾರ್ಯ ಯಶಸ್ವಿಯಾಗಿಲ್ಲ. ಸ್ವಾತಂತ್ರ್ಯಾನಂತರ ಭಾರತದ ಬಹು ದೊಡ್ಡ ಹಿಂಸಾಚಾರಗಳಲ್ಲಿ ಇದೂ ಒಂದಾಗಿದೆ.

## ಮಿಡಿವ ಹೃದಯ, ಅರಳುವ ಮನ




2023 ಸಾಕಷ್ಟು ಜನರಲ್ಲಿ ಹೊಸತನಕ್ಕೆ ಹಾದಿ ಮಾಡಿಕೊಟ್ಟಿದೆ, ವೈದ್ಯಕೀಯ ಕ್ಷೇತ್ರದಲ್ಲೂ ಈ ವರ್ಷ ಉತ್ತಮವಾಗಿಯೇ ಇತ್ತು. ಕೋವಿಡ್ ಪೂರ್ವಭಾವಿಯಲ್ಲಿ ನಮ್ಮ ವೈದ್ಯಕೀಯ ಕ್ಷೇತ್ರ ಅತ್ಯಂತ ಹಿಂದುಳಿದಿತ್ತು. ಆದರೀಗ ಯಾವುದೇ ರೀತಿಯ ಮಹಾಮಾರಿ ಬಂದರೂ ಅದನ್ನು ಎದುರಿಸುವ ಶಕ್ತಿ ಹಾಗೂ ವೈದ್ಯಕೀಯ ಸಲಕರಣೆಗಳು ನಮ್ಮ ರಾಜ್ಯದಲ್ಲಿ ಲಭ್ಯವಿವೆ. ಬೆಂಗಳೂರಿನಂತಹ ನಗರವಷ್ಟೇ ಅಲ್ಲದೆ, ಕಲಬುರ್ಗಿಯಂತಹ ಹಿಂದುಳಿದ ಜಿಲ್ಲೆಯಲ್ಲಿಯೂ ಆಸ್ಪತ್ರೆಗಳು ಮೇಲ್ದರ್ಜೆಗೇರಿವೆ.

ಇತ್ತೀಚಿನ ದಿನಗಳಲ್ಲಿ ಹೃದಯಾಘಾತ ಹೆಚ್ಚಾಗುತ್ತಿದೆ. ಆದರೆ ಶೀಘ್ರ ಚಿಕಿತ್ಸೆ ಸಿಗುವ ಅತ್ಯಾಧುನಿಕ ವ್ಯವಸ್ಥೆಯೂ ನಮ್ಮಲ್ಲಿದೆ. ಹೃದಯದ ಆರೋಗ್ಯಕ್ಕೆ ಪೂರಕವಾದ ಎಲ್ಲ ತಂತ್ರಜ್ಞಾನವೂ ಅತ್ಯಾಧುನಿಕವಾಗಿದೆ. ರೊಬೋಟಿಕ್ ಸರ್ಜರಿ, ರೋಗನಿರ್ಣಯಕ್ಕಾಗಿ ಕೃತಕ ಬುದ್ಧಿಮತ್ತೆಯ ಬಳಕೆ, ಇಕೊಕಾರ್ಡಿಯೊಗ್ರಾಮ್, ಕಾರ್ಡಿಯಾಕ್ ಎಂಆರ್‌ಐ ಸ್ಕ್ಯಾನ್ ಮುಂತಾದ ವೈದ್ಯಕೀಯ ಚಿತ್ರಣವನ್ನೇ ಬದಲಾಯಿಸಿವೆ. ಇಸಿಜಿ ವಿಶ್ಲೇಷಣೆಗಾಗಿ ಮ್ಯಾಜಿಕಾರ್ಡಿಯೊ ಎಐ ಅಲ್ಗಾರಿದಮ್ ಅಭಿವೃದ್ಧಿ ವೈದ್ಯಕೀಯ ಕ್ಷೇತ್ರದ ದೊಡ್ಡ ಸಾಧನೆಯ ಹಾದಿ ಎನ್ನಬಹುದು. ಎಐ ಚಾಲಿತ ಮೊಬೈಲ್ ಅಪ್ಲಿಕೇಶನ್ ಬಳಕೆಯಿಂದ ಹೃದಯ ರೋಗದ ಶೀಘ್ರ ಪತ್ತೆ, ಚಿಕಿತ್ಸೆಗೆ ಅನುಕೂಲವಾಗಿದೆ. ಸಡನ್ ಹಾರ್ಟ್ ಅಟ್ಯಾಕ್‌ಗೂ ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡಬಹುದು. ಅಷ್ಟರಮಟ್ಟಿಗೆ ಆರೋಗ್ಯ ಕ್ಷೇತ್ರ ಬೆಳೆದಿದೆ, ಹೃದಯ ಕಸಿ, ಶಸ್ತ್ರಚಿಕಿತ್ಸೆ ವ್ಯವಸ್ಥೆಯಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದ್ದು, ಅಂಗಾಂಗ ದಾನ ಮೂಲಕ ಜನರಲ್ಲಿ ಆರೋಗ್ಯದ ಅರಿವು ಹೆಚ್ಚಾಗಿರುವುದು ಒಳ್ಳೆಯ ಬೆಳವಣಿಗೆ.

**–ಡಾ. ವಿವೇಕ್ ಜವಳಿ**, ಹೃದಯ ತಜ್ಞರು, ಫೋರ್ಟಿಸ್ ಆಸ್ಪತ್ರೆ, ಬೆಂಗಳೂರು

## ವಿದ್ಯಾರ್ಥಿಗಳ ಜೀವಗಳೊಂದಿಗೆ ಜೂಜು

**ರಾಜಸ್ಥಾನದ** ಕೋಟಾ ನಗರ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಗಳಿಸಲು ಹಂಬಲಿಸುವ ವಿದ್ಯಾರ್ಥಿಗಳಿಗೆ ಶಿಕ್ಷಣದ ಹೆಸರಿನಲ್ಲಿ ಮಾರುಕಟ್ಟೆ ರೂಪಿಸಿರುವ ಒಂದು ಹುಲ್ಲುಗಾವಲು. ‘ಕೋಚಿಂಗ್ ಫ್ಯಾಕ್ಟರಿ’ ಎನ್ನುವುದು ಕೋಟಾದ ಪ್ರಸಿದ್ಧಿ. ಡಾಕ್ಟರ್ ಹಾಗೂ ಎಂಜಿನಿಯರ್ ಆಗುವ ಆಸೆ ಹೊತ್ತು, ದೇಶದ ಬೇರೆ ಬೇರೆ ಭಾಗಗಳಿಂದ ಲಕ್ಷಾಂತರ ವಿದ್ಯಾರ್ಥಿಗಳು ಕೋಟಾಕ್ಕೆ ಬಂದು ನೆಲೆಸಿದ್ದಾರೆ. ಈ ಕೋಚಿಂಗ್ ಫ್ಯಾಕ್ಟರಿ ನಗರ, ವಿದ್ಯಾರ್ಥಿಗಳ ಆತ್ಮಹತ್ಯೆಯ ಕಾರಣದಿಂದಾಗಿ ವರ್ಷದಲ್ಲಿ ಆಗಾಗ್ಗೆ ಸುದ್ದಿಯಲ್ಲಿತ್ತು. 2023ರಲ್ಲಿ 24 ವಿದ್ಯಾರ್ಥಿಗಳು ಕೋಟಾದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆಗಸ್ಟ್ 27ರಂದು ಒಂದೇ ದಿನ ಇಬ್ಬರು ವಿದ್ಯಾರ್ಥಿಗಳು ಜೀವ ಕಳೆದುಕೊಂಡಿದ್ದಾರೆ. 2022ರಲ್ಲಿ 15 ವಿದ್ಯಾರ್ಥಿಗಳು ಸಾವಿಗೆ ಶರಣಾಗಿದ್ದರು. ಕೋಟಾದಲ್ಲಿನ ಈ ಸಾವುಗಳು ಸ್ಪರ್ಧಾತ್ಮಕ ಶಿಕ್ಷಣದ ಹೆಸರಿನಲ್ಲಿ ರೂಪುಗೊಂಡಿರುವ ಅಮಾನವೀಯ ವ್ಯವಸ್ಥೆಯಲ್ಲಿನ ಸುಧಾರಣೆಯ ಅಗತ್ಯವನ್ನು ಹೇಳುವಂತಿವೆ.

ಪ್ರತಿಕ್ರಿಯಿಸಿ: feedback@sudha.co.in